ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ
"ಅಭಿವೃದ್ಧಿ ಭವನ" ಐವಾನ-ಎ-ಶಾಹಿ, ಕಲಬುರಗಿ-585102
ದೂರವಾಣಿ: (08472) - 256767,239556,255564, ಫ್ಯಾಕ್ಸ್ :(08472) 227527
Email:hkabdgulb@gmail.com, hkrdbklb@gmail.com
Website: hkrdb.kar.nic.in

ಸಂಖ್ಯೆ: ಹೈ.ಕ.ಪ್ರ.ಅ.ಮಂ/ತಾಶಾ/ಸುತ್ತೋಲೆ/ 3 /2018-19/1893

ದಿನಾಂಕ: 19/20-08-2018

**-: ಸುತ್ತೋಲೆ-3 :-**

ವಿಷಯ : ಮೂರನೇ ತಂಡದ ಪರಿವೀಕ್ಷಣೆ ವರದಿ ಸಲ್ಲಿಸಲು ಗಡವು (Time limit) ವಿಧಿಸಿರುವ ಬಗ್ಗೆ.

***

ಹೈದ್ರಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ವತಿಯಿಂದ 2013-14ನೇ ಸಾಲಿನಿಂದ 2017-18ರ ವರೆಗೆ ವಿವಿಧ ಅನುಷ್ಠಾನ ಇಲಾಖೆಗಳ ಮುಖಾಂತರ ನಿರ್ವಹಿಸುತ್ತಿರುವ ಎಲ್ಲಾ ಸಿವಿಲ್ ಕಾಮಗಾರಿಗಳು/ ವಿವಿಧ ಪೀಠೋಪಕರಣಗಳ ಸರಬರಾಜುಗಳಿಗೆ ಸಂಬಂಧಿಸಿದಂತೆ 3ನೇ ತಂಡಗಳಿಂದ ಪರಿವೀಕ್ಷಣೆ ಕೈಗೊಂಡು ವರದಿ ಸಲ್ಲಿಸುವುದು ಮಂದಗತಿಯಿಂದ ಆಗುತ್ತಿರುವುದನ್ನು ಗಮನಿಸಲಾಗಿದೆ. ಕಾಮಗಾರಿಗಳು ಮುಕ್ತಾಯಗೊಳಿಸಿದ ತಕ್ಷಣ ಅನುಷ್ಠಾನ ಇಲಾಖೆಗಳು ಲಿಖಿತವಾಗಿ ಆಯಾ ಜಿಲ್ಲೆಗೆ ಸಂಬಂಧಿಸಿದ 3ನೇ ತಂಡದವರಿಗೆ ತಿಳಿಸದೇ ಇರುವುದು ಗಮನಿಸಲಾಗಿದೆ. ಈ ಕಾರಣಗಳಿಂದಾಗಿ ಕಾಮಗಾರಿಗಳಿಗೆ ಬಿಲ್ಲು ಪಾವತಿಸುವ ಪ್ರಕ್ರಿಯೆ ತಡವಾಗುತ್ತಿರುವುದು ಗಮನಕ್ಕೆ ಬಂದಿದೆ.

ಈ ಮೇಲಿನ ವಿಷಯಗಳ ಬಗ್ಗೆ ಅನುಷ್ಠಾನ ಇಲಾಖೆಗಳು ಹಾಗು 3ನೇ ತಂಡದವರು ಅವರುಗಳಿಗೆ ವಹಿಸಿದ ಕೆಲಸಗಳನ್ನು ನಿಷ್ಠೆಯಿಂದ ನಿರ್ವಹಿಸಬೇಕಾಗುತ್ತದೆ. ಇನ್ನು ಮುಂದೆ ಅನುಷ್ಠಾನ ಇಲಾಖೆಗಳು ಕಾಮಗಾರಿಗಳು / ಪೀಠೋಪಕರಣಗಳ ಸರಬರಾಜು ಮುಗಿದ ತಕ್ಷಣ ಲಿಖಿತವಾಗಿ 3ನೇ ತಂಡದವರಿಗೆ ತಿಳಿಸುವುದು ಮತ್ತು ಲಿಖಿತ ಆದೇಶ ಪಡೆದ 3ನೇ ತಂಡದವರು ಸಿವೀಲ್ ಕಾಮಗಾರಿಗಳು / ಸರಬರಾಜು ಮಾಡಿದ ಪೀಠೋಪಕರಣಗಳ ಗುಣಮಟ್ಟ ಪರಿಶೀಲಿಸಿ ಹತ್ತು ದಿನಗಳ ಒಳಗಡೆ ವರದಿಯನ್ನು ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ. ಇದೇ ರೀತಿ ಈಗಾಗಲೇ ಮುಗಿದ ಸಿವಿಲ್ ಕಾಮಗಾರಿಗಳು / ಈಗಾಗಲೇ ಸರಬರಾಜು ಮಾಡಿದ ಪೀಠೋಪಕರಣಗಳಿಗೆ ಸಂಬಂಧಿಸಿದಂತೆ 3ನೇ ತಂಡದವರು ಈ ದಿನಾಂಕದಿಂದ ಅಂದರೆ 20-08-2018 ರಿಂದ ಹತ್ತು ದಿನಗಳ ಒಳಗೆ ಕಾಮಗಾರಿಗಳನ್ನು / ಸರಬರಾಜು ಮಾಡಿದ ಪೀಠೋಪಕರಣಗಳನ್ನು ಪರಿವೀಕ್ಷಣ ಮಾಡಿ (Inspection Report) ವರದಿಯನ್ನು ಹತ್ತು ದಿನಗಳ ಒಳಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಎಲ್ಲಾ ಅನುಷ್ಠಾನ ಇಲಾಖೆಗಳು ಹಾಗು 3ನೇ ತಂಡದವರು ಈ ಸುತ್ತೋಲೆಯಲ್ಲಿ ನೀಡಿದ ಸೂಚನೆಗಳನ್ನು ಕಡ್ಡಾಯವಾಗಿ ಚಾಚುತಪ್ಪದೆ ಪಾಲಿಸತಕ್ಕದ್ದು. ಇಲ್ಲದೆ ಹೋದಲ್ಲಿ ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಲಾಗುವುದೆಂದು ತಿಳಿಯತಕದ್ದು.

19.8.18.

ಕಾರ್ಯದರ್ಶಿಗಳು,
ಹೈ.ಕ.ಪ್ರ.ಅ. ಮಂಡಳಿ, ಕಲಬುರಗಿ

**ಪ್ರತಿಯನ್ನು :**

1. ಜಿಲ್ಲಾಧಿಕಾರಿಗಳು, ಹೈ.ಕ. ವಿಭಾಗ ರವರ ಮಾಹಿತಿಗಾಗಿ ಹಾಗು ಪಾಲನೆಗಾಗಿ.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹೈ.ಕ. ವಿಭಾಗ ರವರ ಮಾಹಿತಿಗಾಗಿ ಹಾಗು ಪಾಲನೆಗಾಗಿ.

**ಇವರಿಗೆ,**

1. ಹೈ.ಕ.ಪ್ರ.ಅ. ಮಂಡಳಿಯ ಎಲ್ಲಾ ಅನುಷ್ಠಾನ ಇಲಾಖೆಗಳಿಗೆ ಮಾಹಿತಿಗಾಗಿ ಹಾಗು ಸೂಕ್ತ ಕ್ರಮಕ್ಕಾಗಿ.
2. ಹೈ.ಕ.ಪ್ರ.ಅ. ಮಂಡಳಿಯ ಎಲ್ಲಾ 3ನೇ ತಂಡದವರಿಗೆ ಮಾಹಿತಿಗಾಗಿ ಹಾಗು ಸೂಕ್ತ ಕ್ರಮಕ್ಕಾಗಿ.
3. ಹೈ.ಕ.ಪ್ರ.ಅ. ಮಂಡಳಿಯ ಎಲ್ಲಾ ಗುತ್ತಿಗೆದಾರರಿಗೆ /ಸರಬರಾಜುದಾರರಿಗೆ ಮಾಹಿತಿಗಾಗಿ ಹಾಗು ಸೂಕ್ತ ಕ್ರಮಕ್ಕಾಗಿ.